**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 295(421) |
| ಸದಸ್ಯರ ಹೆಸರು | : | ಶ್ರೀ ಕಾಂತರಾಜ್ (ಬಿಎಂಎಲ್)<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 23.09.2020 |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಕಂದಾಯ ಇಲಾಖೆಯಡಿಯಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಗ್ರಾಮ ಸಹಾಯಕರ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರವಾದ ಮಾಹಿತಿ ನೀಡುವುದು) | ಕಂದಾಯ ಇಲಾಖೆಯಲ್ಲಿ ಹಾಲಿ 9782 ಗ್ರಾಮ ಸಹಾಯಕರು ಕರ್ತವ್ಯ ನಿರ್ವಹಿಸುತ್ತಿದ್ದು, ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| (ಆ) | ಸದರಿ ನೌಕರರಿಗೆ ನೀಡುತ್ತಿರುವ ಮಾಸಿಕ ವೇತನ ಎಷ್ಟು; ಸದರಿ ನೌಕರರು 38 ವರ್ಷಗಳಿಂದ ಕಡಿಮೆ ವೇತನಕ್ಕೆ ಕೆಲಸ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಗ್ರಾಮ ಸಹಾಯಕರು ಮಿತ ವೇತನದ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದು ಸದರಿಯವರಿಗೆ ಮಾಸಿಕ ಮಿತವೇತನವನ್ನು ಕಾಲಕಾಲಕ್ಕೆ ಹೆಚ್ಚಳ ಮಾಡಲಾಗಿದೆ. ಸರ್ಕಾರದ ಆದೇಶ ಸಂಖ್ಯೆ: ಕಂಇ 83 ಬಿಎಸ್‌ಐ 2011, ದಿನಾಂಕ:26.3.2018ರಲ್ಲಿ ದಿನಾಂಕ:1.4.2018ರಿಂದ ಅನ್ವಯವಾಗುವಂತೆ ಮಾಸಿಕ ಮಿತವೇತನವನ್ನು ರೂ.10,000/- ದಿಂದ ರೂ.12,000/-ಗಳಿಗೆ ಹೆಚ್ಚಿಸಿ ಆದೇಶಿಸಲಾಗಿದೆ. |
| (ಇ) | ಬಂದಿದ್ದಲ್ಲಿ ಇವರನ್ನು ಸರ್ಕಾರವು ಗ್ರೂಪ್ 'ಡಿ' ದರ್ಜೆ ನೌಕರರೆಂದು ಪರಿಗಣಿಸಿ ಆದೇಶ ಹೊರಡಿಸುವುದು ಯಾವಾಗ; | ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲು ಸಂಖ್ಯೆ:4559-4562/1998ರಲ್ಲಿ ದಿನಾಂಕ: 06.11.2003 ರಂದು ನೀಡಿರುವ ತೀರ್ಪಿನ ಅನುಸಾರ ಗ್ರಾಮ ಸಹಾಯಕರ ಸೇವೆಯನ್ನು ಸಕ್ರಮೀಕರಿಸಲು ನಿಯಮಾನುಸಾರ ಅವಕಾಶವಿರುವುದಿಲ್ಲ. |
| (ಈ) | ಲೋಕೋಪಯೋಗಿ, ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮತ್ತು ಇತರೆ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ದಿನಗೂಲಿ ನೌಕರರನ್ನು ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ನಿಯಮಗಳನ್ನು ರೂಪಿಸಿ ವಿಲೀನಗೊಳಿಸಿದಂತೆ ಸದರಿ ಸಿಬ್ಬಂದಿಗಳನ್ನು ವಿಲೀನಗೊಳಿಸಲು ಸರ್ಕಾರ ಉದ್ದೇಶಿಸಿದೆಯೇ; ಹಾಗಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು? | -ಇಲ್ಲ- |

ಸಂಖ್ಯೆ: ಕಂಇ 170 ಬಿಎಸ್‌ಐ 2020

(ಆರ್. ಅಶೋಕ)

ಕಂದಾಯ ಸಚಿವರು

# ಅನುಬಂಧ

## ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:1354

| ಕ್ರ- ಸಂ | ಜಿಲ್ಲೆ | ಕಾರ್ಯನಿರ್ವಹಿಸುತ್ತಿರುವ ಗ್ರಾಮ ಸಹಾಯಕರ ಸಂಖ್ಯೆ |
|---|---|---|
| 01 | ಬೆಂಗಳೂರು ನಗರ | 194 |
| 02 | ಬೆಂಗಳೂರು ಗ್ರಾಮಾಂತರ | 179 |
| 03 | ರಾಮನಗರ | 237 |
| 04 | ಕೋಲಾರ | 244 |
| 05 | ಚಿಕ್ಕಬಳ್ಳಾಪುರ | 248 |
| 06 | ತುಮಕೂರು | 652 |
| 07 | ದಾವಣಗೆರೆ | 231 |
| 08 | ಚಿತ್ರದುರ್ಗ | 341 |
| 09 | ಶಿವಮೊಗ್ಗ | 323 |
| 10 | ಮೈಸೂರು | 460 |
| 11 | ಮಂಡ್ಯ | 499 |
| 12 | ಹಾಸನ | 470 |
| 13 | ಚಿಕ್ಕಮಗಳೂರು | 248 |
| 14 | ದಕ್ಷಿಣ ಕನ್ನಡ | 345 |
| 15 | ಉಡುಪಿ | 223 |
| 16 | ಕೊಡಗು | 134 |
| 17 | ಚಾಮರಾಜನಗರ | 240 |
| 18 | ಬೆಳಗಾವಿ | 721 |
| 19 | ಧಾರವಾಡ | 238 |
| 20 | ವಿಜಯಪುರ | 324 |
| 21 | ಬಾಗಲಕೋಟೆ | 352 |
| 22 | ಉತ್ತರ ಕನ್ನಡ | 400 |
| 23 | ಹಾವೇರಿ | 366 |
| 24 | ಗದಗ | 194 |
| 25 | ಕಲಬುರಗಿ | 426 |
| 26 | ಬೀದರ್ | 340 |
| 27 | ರಾಯಚೂರು | 334 |
| 28 | ಕೊಪ್ಪಳ | 213 |
| 29 | ಬಳ್ಳಾರಿ | 397 |
| 30 | ಯಾದಗಿರಿ | 209 |
| | ಒಟ್ಟು | 9782 |